# ಚಿತ್ರದಿಂದ ಚಿತ್ತಕ್ಕೆ...

ಡಾ. ಆರ್.ಬಾಲಸುಬ್ರಹ್ಮಣ್ಯಂ

ಸ್ವಾಮಿ ವಿವೇಕಾನಂದರು ನನ್ನ ಜೀವನದ ಮೇಲೆ ಅಷ್ಟೊಂದು ಪ್ರಭಾವ ಬೀರಿದ್ದು ಹೇಗೆ ಎಂದು ಹಲವರು ನನ್ನನ್ನು ಕೇಳಿದ್ದಾರೆ. ಹೇಗೆ ವಿವರಿಸಲಿ? ಅವರು ನನಗೆ ಮೊದಲು ಪರಿಚಯವಾದ ಘಟನೆಯನ್ನು ತಿಳಿಸಲೇ ಅಥವಾ ಕಳೆದ 29 ವರ್ಷಗಳ ಕಾಲದಿಂದ ಅವರ



ವಿಚಾರಧಾರೆಯ ಜೊತೆ ನನ್ನ ಒಡನಾಟವನ್ನು ವಿವರಿಸಲೇ? ನಾನು ಬೆಂಗಳೂರಿನ ಎಂಇಎಸ್ ಕಾಲೇಜಿನಲ್ಲಿ ಪಿಯುಸಿ ಓದುತ್ತಿದ್ದಾಗ ವಿವೇಕಾನಂದರು ಅಲ್ಲಿ ತೂಗುಹಾಕಿದ್ದ ಗೋಡೆಯ ಮೇಲಿನ ಚಿತ್ರವಾಗಿದ್ದರು, ಅಷ್ಟೇ! ಆ ಚಿತ್ರದ ಕೆಳಗೆ ಸ್ವಾಮಿ ವಿವೇಕಾನಂದ – ಭಾರತದ ಹಿಂದೂ ಸನ್ಯಾಸಿ ಎಂಬ ಅರ್ಥ ಕೊಡುವ ಇಂಗ್ಲಿಷ್‌ನ ಬರವಣಿಗೆ ಇತ್ತು. ಆ ಚಿತ್ರದ ಬಗ್ಗೆ ಅಥವಾ ಅದರಲ್ಲಿರುವ ವ್ಯಕ್ತಿಯ ಬಗ್ಗೆ ತಲೆಕೆಡಿಸಿಕೊಳ್ಳದೆ, ಅದರ ಕೆಳಗೆ ನಾನು ಅನೇಕ ಬಾರಿ ಓಡಾಡಿದ್ದುಂಟು. ಬಹಳ ಹಿಂದೆ, ವಿವೇಕಾನಂದರ ಬಗ್ಗೆ ಶಾಲೆಯ ಪಠ್ಯಪುಸ್ತಕದಲ್ಲಿ ಓದಿದ್ದು ಬಿಟ್ಟರೆ ಅವರ ಬಗ್ಗೆ ಹೆಚ್ಚೇನೂ ಗೊತ್ತಿರಲಿಲ್ಲ.

## ಓದಿನ ಪ್ರಭಾವ

1982 ರಲ್ಲಿ ಪಿಯುಸಿ ಮುಗಿಸಿ, ಇಂಜಿನಿಯರಿಂಗ್ ಅಥವಾ ವೈದ್ಯಕೀಯ ವ್ಯಾಸಂಗ ಮಾಡಬೇಕೆಂದು ಹೊರಟೆ. ಐಐಟಿಯಲ್ಲಿ ಪ್ರವೇಶ ದೊರೆಯದ್ದಕ್ಕೆ ತುಂಬಾ ಬೇಸರವಾಗಿತ್ತು. ಕಡೆಗೆ ಬೆಂಗಳೂರಿನ ಬಿಎಂಎಸ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಮೆಕ್ಯಾನಿಕಲ್ ಇಂಜಿನಿಯರಿಂಗ್ ಆಯ್ಕೆ ಮಾಡಿಕೊಂಡೆ. ದುರದೃಷ್ಟವಶಾತ್ ಕಾಲೇಜಿನಲ್ಲಿ ನನಗೆ ಮೊದಲ ದಿನ ವಿಪರೀತ ರ್‍ಯಾಗಿಂಗ್ ಮಾಡಿಬಿಟ್ಟರು. ಅದು ಎಷ್ಟರಮಟ್ಟಿಗಿತ್ತೆಂದರೆ, ಮರುದಿನ ಕಾಲೇಜಿಗೆ ಹೋಗಲೂ ಧೈರ್ಯವಿರಲಿಲ್ಲ. ಆದರೆ ಮನೆಯಲ್ಲಿ ಸುಮ್ಮನೆ ಕೂರಲಾದೀತೇ? ಮರುದಿನ ಅಳುಕಿನಿಂದಲೇ ಕಾಲೇಜಿನ ಕಡೆಗೆ ಹೊರಟೆ. ಕಾಲೇಜು ತಲುಪುತ್ತಿದ್ದಂತೆ ಭಯ ಆವರಿಸಿಕೊಂಡುಬಿಟ್ಟಿತು. ಒಳಗೆ ಹೋಗದಿರಲು ನಿರ್ಧರಿಸಿ, ಮುಂದೇನು ಮಾಡಬೇಕೆಂದು ಆಲೋಚಿಸುತ್ತಿದ್ದಾಗ, ಹತ್ತಿರವೇ ಇದ್ದ ರಾಮಕೃಷ್ಣ ಆಶ್ರಮದ ಹಸಿರು, ಶಾಂತ ವಾತಾವರಣ ಕೈಬೀಸಿ ಕರೆಯಿತು. ಪ್ರತಿದಿನ ಅಲ್ಲೇ ಸಮಯ ಕಳೆಯಲು ಪ್ರಾರಂಭಿಸಿದೆ. ಸುಮ್ಮನೆ ಕಾಲ ಕಳೆಯುತ್ತಿದ್ದ ನನ್ನನ್ನು ನೋಡಿದ ಒಬ್ಬರು ಸ್ವಾಮಿಗಳು ಕರೆದು ವಿಚಾರಿಸಿದರು. ಇನ್ನು ಮುಂದೆ ಕೆಲಸವಿಲ್ಲದೆ ಅಲ್ಲಿ ಕೂರುವುದಕ್ಕೆ ಆಗುವುದಿಲ್ಲ ಎಂದು




> **ಭಾರತವನ್ನು ವಿಶ್ವದ ಅತ್ಯಂತ ಬಲಿಷ್ಠ ರಾಷ್ಟ್ರವನ್ನಾಗಿಸುವ ಕನಸು ಕಾಣುತ್ತಿದ್ದ ವಿವೇಕಾನಂದರು ಸದಾ ಹಳೆಯದನ್ನು ಒರೆಗೆ ಹಚ್ಚುತ್ತಾ, ಹೊಸತನ್ನು ಹುಡುಕುತ್ತಾ ಸಾಗಿದರು.**

ಮನವರಿಕೆಯಾಯಿತು. ಆದ್ದರಿಂದ ಅಲ್ಲೇ ಇದ್ದ ಗ್ರಂಥಾಲಯಕ್ಕೆ ತೆರಳಿ, ಸಮಯ ಕಳೆಯುವ ಉದ್ದೇಶದಿಂದ ಕುತೂಹಲಕ್ಕೆ, ವಿವೇಕಾನಂದರ ಕೆಲವು ಪುಸ್ತಕಗಳನ್ನು ಓದಲು ಪ್ರಾರಂಭಿಸಿದೆ. ಓದುತ್ತಾ ಹೋದಂತೆ ವಿವೇಕಾನಂದರು ನನ್ನನ್ನು ಸಂಪೂರ್ಣವಾಗಿ ಆವರಿಸಿಕೊಂಡುಬಿಟ್ಟರು! ಮುಂದಿನ ಕೆಲವೇ ವಾರಗಳಲ್ಲಿ ವಿವೇಕಾನಂದರ ಕೃತಿಶ್ರೇಣಿಯನ್ನು ಓದಿ ಮುಗಿಸಿಬಿಟ್ಟೆ!

ವಿವೇಕಾನಂದರ ಎರಡು ಪುಸ್ತಕಗಳು ವಿಶೇಷವಾಗಿ ನನ್ನ ಗಮನ ಸೆಳೆದವು. ಮೊದಲನೆಯದು His call to the Nation. ಇನ್ನೊಂದು To the Youth of India. ಅವನ್ನು ಓದುತ್ತಾ ಹೋದಂತೆ ನನ್ನ ಮನಸ್ಸು ತುಂಬಾ ತಿಳಿಯಾಯಿತು. ಗೊಂದಲಗಳು ನಿವಾರಣೆಯಾದವು. ನನಗೇನಾದರೂ ವೈದ್ಯಕೀಯ ವ್ಯಾಸಂಗ ಮಾಡಲು ಅವಕಾಶ ಸಿಕ್ಕರೆ, ವಿವೇಕಾನಂದರು ಕರೆ ಕೊಟ್ಟಂತೆ ಹಳ್ಳಿಗಳಿಗೆ ಹೋಗಿ ಸೇವೆ ಮಾಡಬೇಕೆಂದು ನಿರ್ಧರಿಸಿದೆ.

29 ಸೆಪ್ಟೆಂಬರ್ 1982: ಆ ದಿನ ಇನ್ನೂ ನೆನಪಿದೆ. ನಾನವತ್ತು ಬಹಳ ಉತ್ಸುಕನಾಗಿದ್ದೆ. ರಚನಾತ್ಮಕವಾಗಿ ಏನಾದರೂ ಮಾಡಬೇಕೆಂದು ಕಾತರಿಸುತ್ತಿದ್ದೆ. ಸ್ವಾಮೀಜಿಯ ವಿಚಾರಧಾರೆಗಳ ಪ್ರಭಾವವೇ ಅಂಥದ್ದು! ಮನೆಗೆ ಬಂದು ನೋಡಿದರೆ ಚಮತ್ಕಾರವೆಂಬಂತೆ ಒಂದು ಟೆಲಿಗ್ರಾಂ ನನ್ನನ್ನು ಕಾಯುತ್ತಿತ್ತು. ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದಿಂದ ಕಳುಹಿಸಿದ್ದ ಆ ಟೆಲಿಗ್ರಾಂನಲ್ಲಿ ತಕ್ಷಣವೇ ಮೈಸೂರು ಮೆಡಿಕಲ್ ಕಾಲೇಜಿಗೆ ಬಂದು ವೈದ್ಯಕೀಯ ವ್ಯಾಸಂಗಕ್ಕೆ ದಾಖಲಾಗಬೇಕೆಂದು ತಿಳಿಸಲಾಗಿತ್ತು. ಕಾಣದ ಕೈಯೊಂದು ನನ್ನ ಜೀವನದ ಗುರಿ-ಧ್ಯೇಯವನ್ನು ಚಿತ್ರಿಸುತ್ತಿರುವಂತೆ ಭಾಸವಾಯಿತು.

## ಗುಣಗಳ ಗಣಿ

1982 ರಿಂದ ಇಂದಿನವರೆಗೆ ವಿವೇಕಾನಂದರನ್ನು ಅರ್ಥಮಾಡಿಕೊಳ್ಳಲು ನಿರಂತರವಾಗಿ ಪ್ರಯತ್ನಿಸುತ್ತಿದ್ದೇನೆ. ಅವರ ಒಂದು ವಿಶೇಷ ಗುಣವೆಂದರೆ, ಬಡವರ / ನಿರ್ಗತಿಕರ ಬಗೆಗಿನ ಅಪಾರವಾದ ಕಾಳಜಿ. ಈ ಜನರನ್ನು ದೇವರು ಎಂದು ಪರಿಗಣಿಸುತ್ತಿದ್ದ ವಿವೇಕಾನಂದರು, ಅವರ ಉನ್ನತಿ ಮತ್ತು ಉದ್ಧಾರಕ್ಕಾಗಿ ಹಗಲಿರುಳು ಚಿಂತಿಸುತ್ತಿದ್ದರು. ವಿವೇಕಾನಂದರ ಮತ್ತೊಂದು ಗುಣವೆಂದರೆ ಮಾನವೀಯತೆ. ಮನುಕುಲದ ಉದ್ಧಾರಕ್ಕಾಗಿ ಕೆಲಸಮಾಡಲು ಮತ್ತೆ ಮತ್ತೆ ಜನ್ಮ ತಾಳಿ ಬರಲು ತಾನು ಸಿದ್ಧ ಎಂದು ಅವರು ಅನೇಕ ಬಾರಿ ಘೋಷಿಸಿದ್ದಾರೆ.

ಭಾರತದ ಅನೇಕ ಸ್ವಾತಂತ್ರ್ಯ ಹೋರಾಟಗಾರರು ವಿವೇಕಾನಂದರ ವಿಚಾರಧಾರೆಯಿಂದ ಸ್ಫೂರ್ತಿ ಪಡೆದಿದ್ದಾರೆ. ಸುಭಾಷ್ ಚಂದ್ರ ಬೋಸ್‌ರಿಂದ ರಾಜಗೋಪಾಲಾಚಾರಿ ಅವರವರೆಗೆ ಎಲ್ಲರೂ ವಿವೇಕಾನಂದರನ್ನು ಒಬ್ಬ ಪ್ರಬಲ ರಾಷ್ಟ್ರವಾದಿಯನ್ನಾಗಿ ಕಂಡಿದ್ದಾರೆ. ಸತ್ಯಕ್ಕಾಗಿ ನಿರಂತರ ಪರಿಶೋಧನೆ ಅವರ ಮತ್ತೊಂದು ಗುಣವಿಶೇಷ. ಅರ್ಧಸತ್ಯವನ್ನು ಅವರು ಎಂದೂ ಒಪ್ಪುತ್ತಿರಲಿಲ್ಲ. ಸ್ವಂತ ಅನುಭವದಿಂದ ಹೊರಹೊಮ್ಮುವ ವಿಚಾರಗಳು ಸತ್ಯಕ್ಕೆ ಹತ್ತಿರವಾದವು ಎಂದು ಪರಿಗಣಿಸುತ್ತಿದ್ದರು. ಅವರು ಈ ರಾಷ್ಟ್ರ ಕಂಡ ಅತ್ಯುತ್ತಮ ನಾಯಕರಲ್ಲೊಬ್ಬರು. ಯಾವುದೇ ಪದವಿ ಅಥವಾ ಅಧಿಕಾರದ ಬಲವಿಲ್ಲದಿದ್ದರೂ ಇಡೀ ರಾಷ್ಟ್ರದ ಜನಮಾನಸವನ್ನು ತಮ್ಮ ಕೆಲಸ ಹಾಗೂ ವಿಚಾರಧಾರೆಯಿಂದ ಪ್ರಭಾವಿತಗೊಳಿಸಿದ್ದರು. ಎಲ್ಲರಿಂದಲೂ ಅತ್ಯುತ್ತಮವಾದುದ್ದನ್ನೇ ನಿರೀಕ್ಷಿಸುತ್ತಿದ್ದರು. ಅಧಮ ಅಥವಾ ಮಧ್ಯಮ ವಿಚಾರಗಳಿಗೆ ಅವರ ಬತ್ತಳಿಕೆಯಲ್ಲಿ ಸ್ಥಳವೇ ಇರಲಿಲ್ಲ. ತಮ್ಮ ಸಂಪರ್ಕಕ್ಕೆ ಬಂದ ಪ್ರತಿಯೊಬ್ಬರನ್ನೂ ಉತ್ತೇಜಿತರನ್ನಾಗಿ ಮಾಡುತ್ತಿದ್ದರು. ಇದಕ್ಕೆ ಅವರು ಬರೆದ ಪತ್ರಗಳೇ ಸಾಕ್ಷಿ. ಭಾರತವನ್ನು ವಿಶ್ವದ ಅತ್ಯಂತ ಬಲಿಷ್ಠ ರಾಷ್ಟ್ರವನ್ನಾಗಿಸುವ ಕನಸು ಕಾಣುತ್ತಿದ್ದರು. ಅತ್ಯಂತ ಸ್ಫುಟ ಹಾಗೂ ವಾಸ್ತವಿಕತೆಗೆ ಹತ್ತಿರವಾದ ಆಡಳಿತ ಸೂತ್ರಗಳನ್ನಾಧರಿಸಿದ ಸಂಸ್ಥೆಯೊಂದನ್ನು ವಿವೇಕಾನಂದರು ಕಟ್ಟಿದರು. ಅವರು ಹಾಕಿಕೊಟ್ಟ ಮಾರ್ಗದರ್ಶಿಸೂತ್ರಗಳು ಇಂದಿಗೂ ಪ್ರಸ್ತುತವಾಗಿವೆ. ಅವರು ಸದಾ ಹಳೆಯದನ್ನು ಒರೆಗೆ ಹಚ್ಚುತ್ತಾ, ಹೊಸತನ್ನು ಹುಡುಕುತ್ತಾ ಸಾಗಿದರು. ತಮ್ಮ ಅನುಯಾಯಿಗಳಿಗೂ ಇದನ್ನೇ ಮಾಡಲು ಪ್ರೇರೇಪಿಸಿದರು.

ವಿವೇಕಾನಂದರು ವೇದಗಳು, ಬೈಬಲ್, ಕುರ್‌ಆನ್ ಎಲ್ಲವನ್ನೂ ಆಳವಾಗಿ ಬಲ್ಲವರಾಗಿದ್ದರು. ಜಗತ್ತಿನ ಯಾವುದೇ ವಿಚಾರದ ಬಗ್ಗೆ ಅಧಿಕಾರಯುತವಾಗಿ ಮಾತನಾಡುವ ಶಕ್ತಿ ಹಾಗೂ ಜ್ಞಾನ ಹೊಂದಿದ್ದರು. Encyclopedia Britannica ಎಂಬ ಬೃಹದ್ಗ್ರಂಥವನ್ನು ಒಂದೇ ದಿನದಲ್ಲಿ ಓದಿ ಅರಗಿಸಿಕೊಂಡಿದ್ದರು ಎಂದು ಹೇಳಲಾಗುತ್ತದೆ.

ವಿವೇಕಾನಂದರನ್ನು ಪ್ರತಿಸಾರಿ ಓದಿದಾಗಲೂ ನನಗೆ ಹೊಸತೊಂದು ಬೆಳಕಿನಲ್ಲಿಯೇ ಕಾಣುತ್ತಾರೆ. ಅವರ ವಿಚಾರದಲ್ಲಿ ಪ್ರತಿಯೊಬ್ಬರಿಗೂ ಹೀಗೇ ಆದೀತೇನೋ? ವಿವೇಕಾನಂದರು ಭರತಮಾತೆಯ ಹೆಮ್ಮೆಯ ಪುತ್ರರಲ್ಲೊಬ್ಬರು ಮತ್ತು ಅವರ ವಿಚಾರಧಾರೆ ಇಂದಿನ ಭಾರತಕ್ಕೆ ಮೊದಲಿಗಿಂತಲೂ ಪ್ರಸ್ತುತ ಎಂಬುದು ಎಲ್ಲರೂ ಒಪ್ಪಲೇಬೇಕಾದ ಸಂಗತಿ.

*(ಲೇಖಕರು ಹೆಗ್ಗಡದೇವನಕೋಟೆಯನ್ನು ಕೇಂದ್ರವಾಗಿಟ್ಟುಕೊಂಡು ಕಾರ್ಯನಿರ್ವಹಿಸುತ್ತಿರುವ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸ್ಥಾಪಕರು, ಮಾಹಿತಿ ಹಕ್ಕು ಹೋರಾಟಗಾರರು)*

feedback@bodhivruksha.com



ಇಲಸ್ಟ್ರೇಷನ್: ಕಿರಣ್ ಮಾಡಾಳು

### ಸಾಮಾಜಿಕ ಕಳಕಳಿ

ವಿವೇಕಾನಂದರ ಸಮಾಜವಾದ ನನ್ನನ್ನು ಬಹಳಷ್ಟು ಆಕರ್ಷಿಸಿತು. ದೀನ-ದಲಿತರ ಕಣ್ಣೀರು ಒರೆಸದ ಹಾಗೂ ಹಸಿವನ್ನು ನೀಗಿಸದ ದೇವರು ಅಥವಾ ಧರ್ಮದಲ್ಲಿ ತಮಗೆ ನಂಬಿಕೆ ಇಲ್ಲ ಎಂಬ ಮಾತು ಮಾರ್ಮಿಕವಾದುದು. ಮಹಿಳೆಯರ ಉನ್ನತೀಕರಣ ಹಾಗೂ ದುರ್ಬಲರ ಸಬಲೀಕರಣಕ್ಕೆ ಸಂಬಂಧಿಸಿದ ಅವರ ವಿಚಾರಗಳಲ್ಲಿ ದೂರದರ್ಶಿತ್ವ ಹಾಗೂ ಸಾಮಾಜಿಕ ಕಳಕಳಿ ಇತ್ತು. ಅಭಿವೃದ್ಧಿ ಕುರಿತಂತೆ ನನ್ನ ಚಿಂತನೆ ಹಾಗೂ ಕಾರ್ಯಗಳಿಗೆ ವಿವೇಕಾನಂದರ ವಿಚಾರಧಾರೆಗಳೇ ಅಡಿಗಲ್ಲಾಗಿವೆ.